# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

**ಸಂಚಾರ ಆಚರಣೆ ಶಾಖೆ: ಕೇಂದ್ರ ಕಛೇರಿ: 2ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ: ಬೆಂಗಳೂರು-27.**

**ಇ-ಮೇಲ್ *ctmo@mybmtc.com*** **ದೂ.ಸಂ: 080 22537559**

ಸಂಖ್ಯೆ: ಬೆಂಮಸಾಸಂ: ಕೇಕ: ಸಂಚಾರ: ಆ: ಸಾ-2: 2635 :2024-25 ದಿನಾಂಕ: 08.01.2025

## ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 136/2025

**(ಸಂಚಾರ ಆಚರಣಾ ಇಲಾಖೆಯಿಂದ ಹೊರಡಿಸಲಾಗಿದೆ).**

**ವಿಷಯ:** ಸಂಸ್ಥೆಯ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳ ದರ ಪರಿಷ್ಕರಣೆ ಬಗ್ಗೆ.

**ಉಲ್ಲೇಖ :** 1) ಸುತ್ತೋಲೆ ಸಂಖ್ಯೆ 363/2014 ದಿನಾಂಕ 29.04.2014

2) ಸುತ್ತೋಲೆ ಸಂಖ್ಯೆ 467/2018 ದಿನಾಂಕ 06.06.2018

3) ಸುತ್ತೋಲೆ ಸಂಖ್ಯೆ 468/2018 ದಿನಾಂಕ 06.06.2018

4) ಸುತ್ತೋಲೆ ಸಂಖ್ಯೆ 485/2018 ದಿನಾಂಕ 10.11.2018.

5) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 131/2022 ದಿನಾಂಕ 16.02.2022

6) ಸುತ್ತೋಲೆ ಸಂಖ್ಯೆ 548/2022 ದಿನಾಂಕ 01.04.2022

7) ಸುತ್ತೋಲೆ ಸಂಖ್ಯೆ 551/2022 ದಿನಾಂಕ 30.06.2022

8) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 133/2022 ದಿನಾಂಕ 29.12.2022

9) ಸರ್ಕಾರದ ಆದೇಶ ಸಂಖ್ಯೆ ಟಿಡಿ 47 ಟಿಸಿಬಿ 2024 ದಿನಾಂಕ 04.01.2025.

10) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 135/2025 ದಿನಾಂಕ 04.01.2025

..................

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿವಿಧ ವರ್ಗದ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳನ್ನು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ವಿತರಣೆ ಮಾಡುತ್ತಿದೆ. ಉಲ್ಲೇಖ 10 ರಂತೆ ಪ್ರಯಾಣಿಕರ ಬಸ್ ಟಿಕೆಟ್ ದರ ಪರಿಷ್ಕರಣೆಯಾದ ಹಿನ್ನೆಲೆಯಲ್ಲಿ ಸಂಸ್ಥೆಯ ಆರ್ಥಿಕ ದೃಷ್ಟಿಯಿಂದ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳ ದರಗಳನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

**ಸಾಮಾನ್ಯ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳ ದರ ಪರಿಷ್ಕರಣೆ: (ದಿನಾಂಕ 09-01-2025 ರಿಂದ ಜಾರಿಗೆ ಬರಲಿದೆ)**

| ವರ್ಗ | ಪ್ರಸ್ತುತ ದರ ರೂ.ಗಳಲ್ಲಿ | ಪರಿಷ್ಕೃತ ದರ ರೂ.ಗಳಲ್ಲಿ |
|---|---|---|
| ಸಾಮಾನ್ಯ ದೈನಿಕ ಪಾಸು | 70/- | **80/-** |
| ಸಾಮಾನ್ಯ ಸಾಪ್ತಾಹಿಕ (ವಾರದ) ಪಾಸು | 300/- | **350/-** |
| ಹಿರಿಯ ನಾಗರಿಕರ ಸಾಮಾನ್ಯ ಮಾಸಿಕ ಪಾಸು | 945/- | **1080/-** |
| ಸಾಮಾನ್ಯ ಮಾಸಿಕ ಪಾಸು | 1050/- | **1200/-** |
| ನೈಸ್ ರಸ್ತೆಯ ಸಾಮಾನ್ಯ ಮಾಸಿಕ ಪಾಸು (ನೈಸ್ ರಸ್ತೆಯ ಟೋಲ್ ಶುಲ್ಕ ಒಳಗೊಂಡು ) | 2200/- | **2350/-** |

ವಜ್ರ, ವಾಯುವಜ್ರ ದೈನಿಕ ಮತ್ತು ಮಾಸಿಕ ಪಾಸುಗಳ ದರ ಪರಿಷ್ಕರಣೆ: (ದಿನಾಂಕ 09-01-2025 ರಿಂದ ಜಾರಿಗೆ ಬರಲಿದೆ)

(ರೂ.ಗಳಲ್ಲಿ)

<table>
<tr><th rowspan="2">ವರ್ಗ</th><th colspan="4">ಪ್ರಸ್ತುತ ದರ</th><th colspan="4">ಪರಿಷ್ಕೃತ ದರ</th></tr>
<tr><th>ಪಾಸಿನ ದರ</th><th>ಟೋಲ್ ಶುಲ್ಕ</th><th>ಜಿ.ಎಸ್.ಟಿ</th><th>ಒಟ್ಟು</th><th>ಪಾಸಿನ ದರ</th><th>ಟೋಲ್ ಶುಲ್ಕ</th><th>ಜಿ.ಎಸ್.ಟಿ</th><th>ಒಟ್ಟು</th></tr>
<tr><td>ವಜ್ರ ದೈನಿಕ ಪಾಸು</td><td>114.29</td><td>-</td><td>5.71</td><td>120/-</td><td>133.33</td><td>-</td><td>6.67</td><td>140/-</td></tr>
<tr><td>ವಜ್ರ ಮಾಸಿಕ ಪಾಸು</td><td>1714.29</td><td>-</td><td>85.71</td><td>1800/-</td><td>1904.76</td><td>-</td><td>95.24</td><td>2000/-</td></tr>
<tr><td>ವಾಯುವಜ್ರ ಮಾಸಿಕ ಪಾಸು</td><td>3000</td><td>576</td><td>179</td><td>3755/-</td><td>3233.52</td><td>576</td><td>190.48</td><td>4000/-</td></tr>
<tr><td>ವಿದ್ಯಾರ್ಥಿ ವಜ್ರ ಮಾಸಿಕ ಪಾಸು</td><td>1142</td><td>-</td><td>58</td><td>1200/-</td><td>1333.33</td><td>-</td><td>66.67</td><td>1400/-</td></tr>
</table>

ಸಾಮಾನ್ಯ ಸೇವೆಯ ಮಾಸಿಕ ಪಾಸುದಾರರು ವಜ್ರ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರತಿ ಸುತ್ತುವಳಿ ಚೀಟಿ ದರ ಪರಿಷ್ಕರಣೆ: (ದಿನಾಂಕ 09-01-2025 ರಿಂದ ಜಾರಿಗೆ ಬರಲಿದೆ)

(ರೂ.ಗಳಲ್ಲಿ)

<table>
<tr><th rowspan="2">ವರ್ಗ</th><th colspan="3">ಪ್ರಸ್ತುತ ದರ</th><th colspan="3">ಪರಿಷ್ಕೃತ ದರ</th></tr>
<tr><th>ಮೂಲ ದರ</th><th>ಜಿ.ಎಸ್.ಟಿ</th><th>ಒಟ್ಟು</th><th>ಮೂಲ ದರ</th><th>ಜಿ.ಎಸ್.ಟಿ</th><th>ಒಟ್ಟು</th></tr>
<tr><td>ರೂ.1080/- ರ ಹಿರಿಯ ನಾಗರಿಕ ಸಾಮಾನ್ಯ ಮಾಸಿಕ ಪಾಸುದಾರರು</td><td rowspan="2">23.81</td><td rowspan="2">1.19</td><td rowspan="2">25/-</td><td rowspan="3">28.57</td><td rowspan="3">1.43</td><td rowspan="3">30/-</td></tr>
<tr><td>ರೂ.1200/- ರ ಸಾಮಾನ್ಯ ಮಾಸಿಕ ಪಾಸುದಾರರು</td></tr>
<tr><td>ರೂ.2350/- ರ ನೈಸ್ ರಸ್ತೆಯ ಸಾಮಾನ್ಯ ಮಾಸಿಕ ಪಾಸು</td><td>-</td><td>-</td><td>-</td></tr>
</table>

**ವಜ್ರ ಸೇವೆಯ ಮಾಸಿಕ ಪಾಸುದಾರರು ವಾಯುವಜ್ರ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರತಿ ಸುತ್ತುವಳಿ ಚೀಟಿ ದರ ಪರಿಷ್ಕರಣೆ: (ದಿನಾಂಕ 09-01-2025 ರಿಂದ ಜಾರಿಗೆ ಬರಲಿದೆ)**

| ವರ್ಗ | ಪ್ರಸ್ತುತ ದರ ರೂ.ಗಳಲ್ಲಿ | | | ಪರಿಷ್ಕೃತ ದರ ರೂ.ಗಳಲ್ಲಿ | | | |
|---|---|---|---|---|---|---|---|
| | ಮೂಲ ದರ + ಟೋಲ್ ಶುಲ್ಕ | ಜಿ.ಎಸ್.ಟಿ | ಒಟ್ಟು | ಮೂಲ ದರ | ಜಿ.ಎಸ್.ಟಿ | ಟೋಲ್ ಶುಲ್ಕ (ಜಿ.ಎಸ್.ಟಿ ಒಳಗೊಂಡು) | ಒಟ್ಟು |
| **ವಜ್ರ ಮಾಸಿಕ ಪಾಸು** (ನಗರದಿಂದ- ಎಸ್ಟೀಮ್ ಮಾಲ್ ವರೆಗೆ ಎಸ್ಟೀಮ್ ಮಾಲ್‌ದಿಂದ- ನಗರದವರೆಗೆ) | 50/- | 3/- | 53/- | **71.43** | **3.57** | **-** | **75/-** |
| **ವಜ್ರ ಮಾಸಿಕ ಪಾಸು** (ನಗರದಿಂದ-ಕೆಂ.ಅಂತರಾಷ್ಟ್ರೀಯ ವಿಮಾನ ನಿಲ್ದಾಣ- ಕೆಂ.ಅಂತರಾಷ್ಟ್ರೀಯ ವಿಮನಾ ನಿಲ್ದಾಣ-ನಗರದವರೆಗೆ) | 100/- | 5/- | 105/- | **95.24** | **4.76** | **25/-** | **125/-** |

**ಮಾರ್ಗ ಸಂಖ್ಯೆ 298ಎಂ.ಎನ್ (ಕೆಂಪೇಗೌಡ ಬಸ್ ನಿಲ್ದಾಣದಿಂದ ಚಿಕ್ಕಬಳ್ಳಾಪುರದವರೆಗೆ) ಮಾರ್ಗಗಳ ದೈನಿಕ ಮತ್ತು ಮಾಸಿಕ ಪಾಸುಗಳು:**

| ಮಾದರಿ | ಪ್ರಸ್ತುತ ದರ ರೂ.ಗಳಲ್ಲಿ | | | ಪರಿಷ್ಕೃತ ದರ ರೂ.ಗಳಲ್ಲಿ |
|---|---|---|---|---|
| | ಪಾಸಿನ ದರ | ಜಿಎಸ್‌ಟಿ 5% | ಒಟ್ಟು | ಸದರಿ ಪಾಸುಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ. |
| ವಜ್ರ ದೈನಿಕ ಪಾಸು | 142.86 | 7.14 | 150/- | |
| ವಜ್ರ ಮಾಸಿಕ ಪಾಸು | 1904.76 | 95.24 | 2000/- | |

**ಮುಂದುವರೆದು, ವಜ್ರ ಸೇವೆಗಳ ರೂ.140/- ರ ದೈನಿಕ ಪಾಸು ಮತ್ತು ರೂ.2000/- ರ ಮಾಸಿಕ ಪಾಸು ಪಡೆದ ಪ್ರಯಾಣಿಕರಿಗೆ 298 ಎಂ.ಎನ್ ಸೇವೆಗಳಲ್ಲಿ ಕೆಳಕಂಡಂತೆ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ.**

- ರೂ.140/- ವಜ್ರ ದೈನಿಕ ಪಾಸು ಮತ್ತು ರೂ.2000/- ವಜ್ರ ಮಾಸಿಕ ಪಾಸು ಹೊಂದಿರುವ ಪ್ರಯಾಣಿಕರು ಸದರಿ ಸೇವೆಯಲ್ಲಿ ಕೆಂ.ಬ.ನಿಲ್ದಾಣ/ ಈ ಮಾರ್ಗದ ಇತರೆ ಬಸ್ ನಿಲುಗಡೆಗಳಿಂದ ದೇವನಹಳ್ಳಿಯವರೆಗೂ ಹಾಗೂ ದೇವನಹಳ್ಳಿಯಿಂದ ಕೆಂ.ಬ.ನಿಲ್ದಾಣದವರೆಗೂ ಪ್ರಯಾಣಿಸಬಹುದು (ಟೋಲ್ ಪ್ಲಾಜಾ ಮಾರ್ಗವಾಗಿ ಪ್ರಯಾಣಿಸುವ ಪ್ರಯಾಣಿಕರು ಪ್ರತಿ ಪ್ರಯಾಣಕ್ಕೆ ಅನ್ವಯವಾಗುವ ಟೋಲ್ ಶುಲ್ಕ (ಜಿಎಸ್‌ಟಿ ಒಳಗೊಂಡು) ಪಾವತಿಸುವುದು ಕಡ್ಡಾಯ.

- ರೂ.140/- ವಜ್ರ ದೈನಿಕ ಪಾಸು ಮತ್ತು ರೂ.2000/- ವಜ್ರ ಮಾಸಿಕ ಪಾಸು ಹೊಂದಿರುವ ಪ್ರಯಾಣಿಕರು ಸದರಿ ಸೇವೆಯಲ್ಲಿ ಕೆಂ.ಬ.ನಿಲ್ದಾಣ/ಈ ಮಾರ್ಗದ ಇತರೆ ಬಸ್ ನಿಲುಗಡೆಗಳಿಂದ ಚಿಕ್ಕಬಳ್ಳಾಪುರದವರೆಗೂ ಹಾಗೂ ಚಿಕ್ಕಬಳ್ಳಾಪುರದಿಂದ ಕೆಂ.ಬ.ನಿಲ್ದಾಣದವರೆಗೂ ಪ್ರಯಾಣಿಸಲು ಹೆಚ್ಚುವರಿಯಾಗಿ ಪ್ರತಿ ಸುತ್ತುವಳಿಗೆ ರೂ.40/- (ಜಿಎಸ್‌ಟಿ ಒಳಗೊಂಡು) ಹಾಗೂ ಅನ್ವಯವಾಗುವ ಟೋಲ್ ಶುಲ್ಕ ಪಾವತಿಸುವುದು ಕಡ್ಡಾಯ.
- ಸದರಿ ಪಾಸುದಾರರು ಪಾಸಿನೊಂದಿಗೆ ದೇವನಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೆ ಹಾಗೂ ಚಿಕ್ಕಬಳ್ಳಾಪುರದಿಂದ ದೇವನಹಳ್ಳಿಗೆ ಪ್ರಯಾಣಿಸಬೇಕಾದಲ್ಲಿ ಪ್ರತಿ ಸುತ್ತುವಳಿಗೆ ರೂ.40/- (ಜಿ.ಎಸ್.ಟಿ ಒಳಗೊಂಡು) ಹೆಚ್ಚುವರಿಯಾಗಿ ಪಾವತಿಸುವುದು.
- ಸಾಮಾನ್ಯ ಮಾಸಿಕ ಪಾಸುದಾರರು ಈ ಸೇವೆಗಳಲ್ಲಿ ಪಾಸಿನೊಂದಿಗೆ ಪ್ರಯಾಣಿಸಲು ಅವಕಾಶವಿರುವುದಿಲ್ಲ.

ಮೇಲ್ಕಂಡ ಎಲ್ಲಾ ಪಾಸುದಾರರು ಟೋಲ್ ಮಾರ್ಗಗಳಲ್ಲಿ ಅನ್ವಯವಾಗುವ ಟೋಲ್ ಶುಲ್ಕಗಳನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ

ಸಂಸ್ಥೆಯು ವಿತರಿಸುವ ಯಾವುದೇ ಪಾಸುಗಳನ್ನು, ಸಂಸ್ಥೆಯ ವಿಶೇಷ (ಉದಾ: ಬೆಂಗಳೂರು ದರ್ಶಿನಿ, ಈಶ ಫೌಂಡೇಶನ್, ವಂಡರ್‌ಲಾ,,) ಸೇವೆಗಳಲ್ಲಿ ಮಾನ್ಯ ಇರುವುದಿಲ್ಲ.

**ಪರಿಷ್ಕೃತ ದರದ ಪಾಸುಗಳು ಸರಬರಾಜುಗೊಳ್ಳುವವರೆಗೆ ಪ್ರಸ್ತುತ ಇರುವ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳ ಮೇಲೆ ಪರಿಷ್ಕೃತ ಪಾಸಿನ ದರದ ಮೊಹರು/ಸ್ಟಿಕ್ಕರ್‌ಗಳನ್ನು ಹಾಕಿ ವಿತರಣೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು ಕಡ್ಡಾಯವಾಗಿ ಕ್ರಮ ಕೈಗೊಳ್ಳುವುದು.**

**ಪರಿಷ್ಕೃತ ಪಾಸಿನ ದರಗಳನ್ನು ಇ.ಟಿ.ಎಂ ಯಂತ್ರದಲ್ಲಿ ಹಾಗೂ ಟುಮ್ಯಾಕ್ ಮೊಬೈಲ್ ಆಫ್ (ಡಿಜಿಟಲ್ ಪಾಸುಗಳು) ನಲ್ಲಿ ಅಳವಡಿಸಲು ಮುಖ್ಯ ಗಣಕ ವ್ಯವಸ್ಥಾಪಕರು ಅಗತ್ಯ ಕ್ರಮ ಕೈಗೊಳ್ಳುವುದು.**

ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು ಪರಿಷ್ಕೃತ ದರಗಳ ಪಾಸುಗಳನ್ನು ಸರಬರಾಜುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿಗಳು, ಹಿರಿಯ/ಘಟಕ ವ್ಯವಸ್ಥಾಪಕರುಗಳು ಹಾಗೂ ಬಸ್ ನಿಲ್ದಾಣಾಧಿಕಾರಿಗಳು ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪಾಸುಗಳ ದರ ಪರಿಷ್ಕರಣೆಯ ಬಗ್ಗೆ ಸೂಚನಾ ಫಲಕದಲ್ಲಿ ಪ್ರಕಟಿಸಿ ನಿರ್ವಾಹಕ/ಚಾಲಕ/ಚಾಲಕ ಕಂ ನಿರ್ವಾಹಕ ಹಾಗೂ ಇತರ ಸಂಬಂಧಪಟ್ಟವರ ಗಮನಕ್ಕೆ ತಂದು ಸಾಮಾನ್ಯ ಸ್ಥಾಯಿ ಆದೇಶ ಜಾರಿಯಲ್ಲಿ ಯಾವುದೇ ತಪ್ಪುಗಳಿಗೆ ಅವಕಾಶವಾಗದಂತೆ ಎಚ್ಚರವಹಿಸುವುದು

ಮೇಲ್ಕಂಡ ಬದಲಾವಣೆಯನ್ನು ಹೊರತುಪಡಿಸಿ ಈವರೆಗೆ ನೀಡಲಾದ ಸಾಮಾನ್ಯ ಸ್ಥಾಯಿ ಆದೇಶ/ಸುತ್ತೋಲೆಗಳಲ್ಲಿ ನೀಡಿರುವ ಸೂಚನೆ/ನಿರ್ದೇಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**-ಸಹಿ-**

**ವ್ಯವಸ್ಥಾಪಕ ನಿರ್ದೇಶಕರು**

**ಬೆಂ.ಮ.ಸಾ.ಸಂಸ್ಥೆ**

**ಪ್ರತಿಯನ್ನು ಗೌರವಪೂರ್ವಕವಾಗಿ,**

1. ಆಪ್ತ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗ ಕಳುಹಿಸಲಾಗಿದೆ.
2. ಆಪ್ತ ಕಾರ್ಯದರ್ಶಿಗಳು/ಸಹಾಯಕರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ಮಾನ್ಯ ನಿರ್ದೇಶಕರು (ಮಾ.ತಂ) & (ಭ&ಜಾ) ಬೆಂ.ಮ.ಸಾ.ಸಂಸ್ಥೆ ರವರ ಕಛೇರಿಗೆ ಹಾಗೂ ಮೇಲಿನ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕಳುಹಿಸಲಾಗಿದೆ.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ರವಾನಿಸಲಾಗಿದೆ.
4. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ ವಿಭಾಗೀಯ ಸಂಚಾರ ಅಧಿಕಾರಿಗಳು/ ಘಟಕ ವ್ಯವಸ್ಥಾಪಕರುಗಳು/ ಬಸ್ ನಿಲ್ದಾಣಾಧಿಕಾರಿಗಳು/ತನಿಖಾ ದಳ/ ನಿಯಂತ್ರಣಾ ಕೊಠಡಿ ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

**ಮುಖ್ಯ ಸಂಚಾರ ವ್ಯವಸ್ಥಾಪಕರು(ಆ)**

**ಬೆಂ.ಮ.ಸಾ.ಸಂಸ್ಥೆ.**